ಇಂದು ದಿಃ**29-08-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ ಸಿ ವಕೀಲರಿಂದ 4 ರಿಂದ 6 ನೇ ಪ್ರತಿವಾದಿ ಪರಃ**

ಈ ದಾವೆಯನ್ನು ಮಂಜಮ್ಮ ಪ್ರತಿವಾದಿಯರ ವಿರುದ್ದ ಹಿಸ್ಸೆ ಕೇಳಿ ಮಾಡಿದ್ದಾರೆ. ಮಳ್ಳಳ್ಳಿ ಗ್ರಾಮದ ಸರ್ವೇ ನಂಬರ್ ಗಳ ಕುರಿತು ಈ ದಾವೆ ಮಾಡಿದ್ದಾರೆ. 6 ಆಸ್ತಿಗಳ ಕುರಿತು ದಾವೆ ಮಾಡಿದ್ದಾಳೆ . ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇದೆ. ನನ್ನ ತಂದೆ ಮತ್ತು ಕರಿಬಸಪ್ಪ ಅಣ್ಣ ತಮ್ಮಂದಿರು. ಅವರು ಹಿಸ್ಸೆ ಮಾಡಿಕೊಂಡಿರುತ್ತಾರೆ. ಅಣ್ಣ ತಮ್ಮ ಆಸ್ತಿ ಹಂಚಿಕೊಂಡರು. ಕರಿಬಸಪ್ಪ ಈತನಿಗೆ ಇಬ್ಬರು ಹೆಂಡತಿಯರು. ಅವರೆಂದರೆ ಗೌರಮ್ಮ ಮತ್ತು ಗಿರಿಜಮ್ಮ. ಗಿರಿಜಮ್ಮ ಇವಳಿಗೆ ಅನುರಾಧ ಮತ್ತು ಹನುಮನಗೌಡ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ದಾವಾ ಆಸ್ತಿಗಳು ಕರಿಬಸಪ್ಪ ಈತನ ಸ್ವಂತ ಆಸ್ತಿಗಳು ಎಂದರೆ ಸರಿ . ಸಾಕ್ಷಿ ನಮ್ಮ ಹಿರಿಯರಿಂದ ಬಂದಿರುತ್ತವೆಂದು ಹೇಳುತ್ತಾರೆ. ಕರಿಬಸಪ್ಪ ಮತ್ತು ಆತನ ಮಕ್ಕಳು ಸೇರಿ ಕೆಲವೊಂದು ಆಸ್ತಿಗಳನ್ನು ಮಾರಿದ್ದಾರೆ ಎಂದರೆ ಸಾಕ್ಷಿ ಮೊದಲು ಗೊತ್ತಿರಲಿಲ್ಲ ಈಗ ಖಾತೆ ತೆಗೆಸಿದ ನಂತರ ಗೊತ್ತಾಗಿರುತ್ತದೆ ಎಂದು ಹೇಳುತ್ತಾರೆ. ಪಾಳ್ಯ ಗ್ರಾಮದ ಸರ್ವೇ ನಂಬರ್ 39/4 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ , ನನ್ನ ತಂದೆ ಇದ್ದಾಗ ಮಾರಿದ್ದಾರೆಂದು ಹೇಳುತ್ತಾರೆ, ಮಹದೇವಪ್ಪ ಎನ್ನುವವರಿಗೆ ದಿನಾಂಕಃ 20-08-2019 ರಂದು ನಾವೆಲ್ಲರೂ ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿ .

ಕರಿಬಸಪ್ಪ ಸುಮಾರು 8 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. 9 ನೇ ಪ್ರತಿವಾದಿಗೆ ಕರಿಬಸಪ್ಪ ಜಮೀನು ಮಾರಿರುವ ವಿಷಯ ನನಗೆ ಗೊತ್ತಿಲ್ಲ. ಸರ್ವೇ ನಂ. 33/4 ರಲ್ಲಿ 38 ಗುಂಟೆ ಮಾರಿದ್ದಾರೆ ಎಂದರೆ ಗೊತ್ತಿಲ್ಲ. ವಾದಿ ನನಗೆ

ತಂಗಿಯಾಗಬೇಕು. 9 ನೇ ಪ್ರತಿವಾದಿಯ ಕ್ರಯ ಪತ್ರಕ್ಕೆ ವಾದಿಯೂ ಸಹ ಸಹಿ ಮಾಡಿದ್ದರೂ , ಆಕೆಗೆ ಹಿಸ್ಸೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.